REVIEW OF RESEARCH
IMPACT FACTOR : 5.7631(UIF) UGC APPROVED JOURNAL NO. 48514 ISSN: 2249-894X

VOLUME - 8 | ISSUE - 4 | JANUARY - 2019

# ಬಸವಾದಿ ಶರಣರ ವಚನಗಳಲ್ಲಿ ಸಾಮಾಜಿಕ ನ್ಯಾಯ


[ಶ್ರೀಮತಿ ಮಲ್ಲವ್ವ ಮಾದರ[1] , ಡಾ.ಎಮ್.ಬಿ. ದಳಪತಿ[2]
[1]ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿನಿ , ರಾಜ್ಯಶಾಸ್ತ್ರ ವಿಭಾಗ , ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
[2]ಸಹ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು , ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

**ಸಾರಾಂಶ :**

ಕಳೆದ ಸಾವಿರಾರು ವರ್ಷಗಳಿಂದಲೂ ಭಾರತ ದೇಶದಲ್ಲಿ ಸಮಾಜೋ–ರಾಜಕೀಯ ವ್ಯವಸ್ಥೆಯು ಗೊಂದಲಮಯವಾಗಿದೆ. ಈ ಗೊಂದಲಮಯವನ್ನು ನಿರ್ಮೂಲನೆಗೊಳಿಸುವಲ್ಲಿ ವ್ಯಕ್ತಿ ಮತ್ತು ಸಮಾಜಕ್ಕೆ ತನ್ನತನದ ಪ್ರಜ್ಞೆಯು ಅವಶ್ಯಕವಾಗಿರುತ್ತದೆ. ತನ್ನತನದ ಪ್ರಜ್ಞೆ ಇಲ್ಲದ ವ್ಯಕ್ತಿಯಾಗಲಿ ವ್ಯಕ್ತಿಯಿಂದೊಡಗೂಡಿದ ಸಮಾಜೋ–ರಾಜಕೀಯ ವ್ಯವಸ್ಥೆಯಾಗಲಿ ಸುಭದ್ರವಾಗಿ ಬದುಕಲಾರವು. ಆ ದಿಶೆಯಲ್ಲಿ ಬಸವಾದಿ ಶರಣರ ವಚನ ಚಳುವಳಿಯು ವ್ಯಕ್ತಿಗೆ ಮತ್ತು ಸಮುದಾಯಕ್ಕೆ ಸ್ಪೂರ್ತಿ ಮತ್ತು ಪ್ರೇರಣೆಯನ್ನು ಕೊಟ್ಟು ರಾಷ್ಟ್ರ ಕಟ್ಟುವ ಪ್ರಕ್ರಿಯೆಗೆ ಅಮೃತ ಅಡಿಪಾಯವೆಂದೇ ಪರಿಗಣಿಸಲಾಗಿದೆ. ಬಸವಾದಿ ಶರಣರು ತಮ್ಮ ವಚನದ ಮೂಲಕ ಸಮಾಜೋ–ಧಾರ್ಮಿಕ ಕೊಳೆಯನ್ನು ತೊಳೆದು ಜನರ ಅಮಾಯಕತೆಯನ್ನು ದೂರ ಮಾಡಿ, ಮಹಿಳೆಯನ್ನು ಧರ್ಮಶಾಸನದ ಮೂಲಕ ವಿಮೋಚನೆಗೊಳಿಸಿ ಸುಭದ್ರವಾದ ರಾಷ್ಟ್ರವನ್ನು ಕಟ್ಟಲು ಬಸವಾದಿ ಶರಣರ ಸಂದೇಶಗಳು ಪೂರಕವಾಗಿವೆ. ಧರ್ಮೋ–ಆಧ್ಯಾತ್ಮದ ಅಡಿಯಲ್ಲಿ ನವಭಾರತ ಪುನರುಜ್ಜೀವನಗೊಳ್ಳುವಂತಾಗಲಿ. ರಾಷ್ಟ್ರದ ಅಂತಃಸತ್ವದ ಸೂಪ್ತ ಚೇತನಗೊಳ್ಳಲೆಂಬುದೇ ಈ ಲೇಖನದ ಮಹಾದಾಶಯವಾಗಿದೆ.

**ಪೀಠಿಕೆ :**

"ಹುಟ್ಟುವುದೇ ಭವ, ಬೆಳೆಯುವುದೇ ಬಂಧನ, ಸಾಯುವುದೇ ಮೋಕ್ಷ." ಹುಟ್ಟು ಸಾವುಗಳು ಮಾನವನ ಕೈಯಲ್ಲಿಲ್ಲ. ಆದರೆ ಬೆಳೆದು ಬದುಕುವುದು ಮಾತ್ರ ಮಾನವನ ಕೈಯಲ್ಲಿದೆ. ಹೇಗೆ ಬದುಕಿದ್ದೇವೆ ಎನ್ನುವುದಕ್ಕಿಂತಲೂ ಹೇಗೆ ಬದುಕಬೇಕಾಗಿತ್ತು ಎಂಬುದು ಮುಖ್ಯ. ತಾನು ಚೆನ್ನಾಗಿ ಬದುಕಿ ಇತರರನ್ನು ಚೆನ್ನಾಗಿ ಬದುಕುಲು ಅಣಿಗೊಳಿಸುವವನೇ ಮಹಾನ್ ವ್ಯಕ್ತಿಯು. ವ್ಯಕ್ತಿ ಪರಿಪೂರ್ಣನಲ್ಲ. ಪರಿಪೂರ್ಣತೆಯ ಪ್ರಾಪ್ತಿಗಾಗಿ ಪರಿತಪಿಸುತ್ತಲಿದ್ದಾನೆ. ತನ್ನ ಪರಿಪೂರ್ಣತೆಯ ಪ್ರಾಪ್ತಿಗಾಗಿ ಕುಟುಂಬ, ಸಮಾಜ, ರಾಜ್ಯ, ರಾಷ್ಟ್ರಗಳನ್ನು ರಚಿಸಿಕೊಂಡಿದ್ದಾನೆ. ತನ್ನ ನಡತೆಯ ನಿಯಂತ್ರಣಕ್ಕಾಗಿ ನಡತೆಗಳ ಸಂಹಿತೆಯನ್ನೊಳಗೊಂಡ ಸಂವಿಧಾನವನ್ನು ರಚಿಸಿಕೊಂಡಿದ್ದಾನೆ. ಅನಾಗರಿಕ ನಿಸರ್ಗದ ಸ್ಥಿತಿಯಿಂದ ನಾಗರಿಕ ಸ್ಥಿತಿಗೂ ಮುಟ್ಟಿದ್ದಾನೆ. ಅಂತರಂಗದಲ್ಲಿ ಅಂತರ್ಗತವಾದ ದಿವ್ಯಸುಪ್ತ ಚೇತನ ಶಕ್ತಿಯನ್ನು ಹೊರಗೆಳೆದು ತರಲು ಧರ್ಮ, ದೇವರು ಮತ್ತು ಅಧ್ಯಾತ್ಮಿಕ ಶಕ್ತಿಗಳಿಗೂ ಮಾರು ಹೋಗಿದ್ದಾನೆ. ಬಾಹ್ಯ ಭೌತಿಕ ಶುದ್ಧತೆಗಿಂತಲೂ ಆಂತರಿಕ ಭಾವನಾತ್ಮಕ ಪರಿಶುದ್ಧತೆಗೆ ಹೆಚ್ಚು ಬೆಲೆಯನ್ನು ಕೊಟ್ಟನು. ಸರ್ವರ ಹೃದಯದಲ್ಲೂ ಸರ್ವೇಶ್ವರನನ್ನು ಕಂಡುಕೊಂಡದು. ಎಲ್ಲ ಮೋಹವನ್ನು ಹರಿದೊಗೆದು ಅದರಾಚೆ ನೋಡುವ ಸ್ಥಿತಿಯೇ ಮುಕ್ತಿಗೆ ಮೂಲ ಅಡಿಪಾಯವೆಂದನು. ಅಂತಿಮ ಸತ್ಯದ ಅನುಸಂಧಾನವೇ ತನ್ನೆಲ್ಲ ಸಮಸ್ಯೆಗಳಿಗೆ ಕಾರಣನೆಂದನು. ಸುಧಾರಣೆಯೆನ್ನುವುದು ಬಾಹ್ಯ ಒತ್ತಡದಿಂದಷ್ಟೆ ಬಾರದೆ ಅದು ಅಂತರಿಕ ಭಾವದಿಂದ ಬರಬೇಕೆಂದನು. ಹಾಗಾಗಿ ಭೌತಿಕತೆ ಮತ್ತು ಭಾವನಾತ್ಮಕತೆಗಳೆರಡೂ ವಿಶ್ವವನ್ನು ಮುನ್ನಡಿಸುವ ಎರಡು ಮಹಾನ್ ದಾರಿದೀಪಗಳೆಂದು ಅರ್ಥೈಸಿಕೊಂಡನು. ವಿಶ್ವವೇ ವಿಶ್ವಾತ್ಮನ ಪ್ರತಿರೂಪವೆಂದು ಬೋಧಿಸಿದನು. ಜನಸೇವೆಯೇ ಜನಾರ್ಧನನ ಸೇವೆ, ಮಾನವ ಸೇವೆಯೇ ಮಾಧವ ಸೇವೆ, ನರಸೇವೆಯೇ ನಾರಾಯಣ ಸೇವೆ, ಸರ್ವಜನೋ ಸುಖಿನೋ ಭವಂತು ಎಂದು ಧರ್ಮದ ಮೂಲ ನೆಲೆಯಲ್ಲಿ



ಅಂದುಕೊಂಡನು. ಸಮಸ್ತ ಜೀವಿಗಳೆಲ್ಲವೂ ಆ ಸೃಷ್ಟಿಕರ್ತನ ಆತ್ಮಚೇತನವೆಂದನು. ಇಷ್ಟೆಲ್ಲ ಬೊಗಳೆ ಬಿಡುವ ಮಾನವ ತನ್ನಂತೆ ಇರುವ ತಮ್ಮ ಸ್ವರಾಷ್ಟ್ರೀಯರಾದ ಸ್ವಧರ್ಮಿಯರನ್ನು ಮಾತ್ರ ಹಂದಿ ನಾಯಿ ನರಿಗಳಿಗಿಂತಲೂ ಕೀಳಾಗಿ ನಡೆಸಿಕೊಂಡಿದ್ದು ವಿಚಿತ್ರವೆನಿಸಿದರೂ ಸತ್ಯವೇ ಆಗಿದೆ. ಹಾಗಾಗಿ ಭಾರತೀಯ ಬಹುಸಂಖ್ಯಾತರು ಸಾಮಾಜಿಕ ನ್ಯಾಯದಿಂದ ವಂಚಿತರಾದ ಬಹುಸಂಖ್ಯಾತರು ತಮ್ಮತನದ ಪ್ರಜ್ಞೆಯನ್ನು ಕಳೆದುಕೊಂಡಿದ್ದರು. ಆ ಕಾರಣದಿಂದ ಅವರು ಅರೆರಾಷ್ಟ್ರೀಯರಾಗಿ ಅರೆಪ್ರಜ್ಞಾವಸ್ಥೆಯಲ್ಲಿ ಉಳಿದಿದ್ದರು. ಹಾಗಾಗಿ ರಾಷ್ಟ್ರವು ತನ್ನತನದ ಪ್ರಜ್ಞೆಯಿಂದ ವಂಚಿತವಾಗಿತ್ತು. ವ್ಯಕ್ತಿಯ ತನ್ನತನದ ಪ್ರಜ್ಞೆಯಲ್ಲೇ ತನ್ನ ರಾಷ್ಟ್ರಪ್ರಜ್ಞೆಯು ಅಡಗಿದೆ ಎಂಬ ಸತ್ಯವನ್ನು ಸಾರಲು 12ನೇ ಶತಮಾನದ ಬಸವಾದಿ ಶರಣರು ಬರಬೇಕಾಗಿತ್ತು. ಪ್ರಮುಖವಾಗಿ ಸಾಮಾಜಿಕ ನ್ಯಾಯಕ್ಕೆ ಮೂಲ ತಾಯಿ ಬೇರಿನಂತಿರುವ ಧರ್ಮ, ದೇವರು, ಧಾರ್ಮಿಕ ಗ್ರಂಥಗಳು, ಶಿಕ್ಷಣ, ಜ್ಞಾನಾರ್ಜನೆ, ವರ್ಣ, ಜಾತಿ, ಅಸ್ಪೃಶ್ಯತೆ, ಲಿಂಗತಾರತಮ್ಯತೆ ಮತ್ತು ವರ್ಗ ತಾರತಮ್ಯಗಳು ಮೂಲಭೂತ ಅಂಶಗಳಾಗಿದ್ದವು. ಈ ಮೇಲಿನ ಅಂಶಗಳೆಲ್ಲವೂ ಉಳ್ಳ ಮಡಿವಂತರ ಮಾಲಿಕತ್ವದ ಸರಕಿನಂತಾಗಿ ಹೋಗಿದ್ದವು. ಹಾಗಾಗಿ ಬಹುಸಂಖ್ಯಾತ ಜನಕೋಟಿಯು ಈ ಮೇಲಿನ ಎಲ್ಲ ಅಂಶಗಳ ಸೌಲಭ್ಯಗಳಿಂದ ವಂಚಿತರಾಗಿದ್ದರು. ಆದ್ದರಿಂದ ಈ ಮೇಲಿನ ಎಲ್ಲ ಅಂಶಗಳನ್ನು ಸಾರ್ವತ್ರೀಕರಣಗೊಳಿಸಿ ಸಾಮಾಜಿಕತೆಯ ನೆಲೆಯಲ್ಲಿ ನೋಡುವ ದೃಷ್ಟಿಕೋನವನ್ನು ತರಬೇಕಾಗಿತ್ತು. ಅದಕ್ಕಾಗಿ ಒಮದು ತಳಸ್ಪರ್ಶವಾದ ಬೃಹತ್ ಕ್ರಾಂತಿಯನ್ನೇ ಮಾಡಬೇಕಾಗಿತ್ತು ಸಮಾಜದಲ್ಲಿ ಸಾಮಾಜಿಕ ನ್ಯಾಯದಿಂದ ವಂಚಿತರಾದವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಎಳೆದು ತರಬೇಕಾಗಿತ್ತು. ಅದಕ್ಕಾಗಿ ಈ ಮೇಲೆ ಹೇಳಿದ ಎಲ್ಲ ಅಂಶಗಳ ಪುನರ್ ವ್ಯಾಖ್ಯಾನ ಮಾಡುವುದು ಬಹು ಅವಶ್ಯವಾಗಿತ್ತು. ಈ ಪ್ರಕ್ರಿಯೆಯನ್ನೇ ನಾವು ಸಾಮಾಜಿಕ ನ್ಯಾಯವೆಂದು ಕರೆಯುತ್ತೇವೆ. ಹಾಗಾಗಿ ಭಾರತದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವೆನ್ನುವ ವಿಷಯವೂ ಯಾವಾಗಲೂ ಪ್ರಸ್ತುತವಾಗಿರುತ್ತದೆ. ಮತ್ತು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಈ ಎಲ್ಲ ಗ್ರಹಿಕೆಗಳ ಹಿನ್ನಲೆಯಲ್ಲಿ ಈ ಸಂಶೋಧನಾ ಲೇಖನವು ತುಂಬಾ ಮಹತ್ವವನ್ನು ಪಡೆದಿರುತ್ತದೆ.

12ನೆಯ ಶತಮಾನವು ಅದೊಂದು ಎಂದೆಂದಿಗೂ ಕಂಡರಿಯದ ಕೇಳರಿಯದ ಕ್ರಾಂತಿಯುಗವು. ಸತ್ಯಶುದ್ಧಕಾಯಕ, ದಾಸೋಹ, ವಚನಸಾಹಿತ್ಯದ ತಳಹದಿಯ ಮೇಲೆ ರೂಪುಗೊಂಡ ವ್ಯಕ್ತಿವಿಕಾಸದಿಂದ ವಿಶ್ವವಿಕಾಸದತ್ತ ದಾಪುಗಾಲು ಹಾಕುವ ಬಸವಾದಿ ಶರಣರು ವ್ಯಕ್ತಿ ಮೊದಲ್ಗೊಂಡು ವಿಶ್ವಕಲ್ಯಾಣವನ್ನು ಬಯಸಿದವರು. ವಿಶ್ವಕಲ್ಯಾಣಕ್ಕಾಗಿ ಮಾನವೀಯ ತತ್ವಗಳ ಮೇಲೆ ನಿತ್ಯನೂತನವಾದ ಮೌಲ್ಯಗಳ ಮಂಥನಕ್ಕಾಗಿ ಅನುಭವದ ಮಂಟಪವನ್ನು ರಚಿಸಿ ಇಂದಿನ ಪ್ರಜಾಪ್ರಭುತ್ವದ ಪಾರ್ಲಿಮೆಂಟಾಗಿ ಪರಿವರ್ತಿಸಿ ಸರ್ವರ ಸುಖ ಸಮೃದ್ಧಿಯನ್ನು ಬಯಸಿದಾತರು.

ಒಂದು ಲಕ್ಷದಾ ತೊಂಬತ್ತಾರು ಸಾವಿರ ಜನಜಂಗಮರು, ಏಳುನೂರದಾ ಎಪ್ಪತ್ತು ಗಣಾಧೀಶರು, 360 ವಚನಕಾರರು ಮತ್ತು 33 ಜನ ಮಹಿಳಾ ವಚನಕಾರರು, ವಿಶ್ವಗುರು ಜಗಜ್ಯೋತಿ ಬಸವೇಶ್ವರರ ನಾಯಕತ್ವದಲ್ಲಿ ಶೂನ್ಯ ಸಂಪಾದನೆಯ ಪೀಠದ ಅಧ್ಯಕ್ಷರಾಗಿದ್ದ ಅಲ್ಲಮಪ್ರಭುಗಳು "ಅನುಭವ ಮಂಟಪ" ಎಂಬ ವಿಶ್ವದ ಮೊಟ್ಟಮೊದಲಿನ 'ಜನಪರ ಸಂಪತ್ತು' ಎಂಬುದೊಂದು ಯಾವ ಜಾತಿ, ಮತ, ಪಂಥ, ಲಿಂಗತಾರಮ್ಯವಿಲ್ಲದ ವಿಶ್ವವೇ ಬೆರಗಾಗುವಂತಹ ವ್ಯವಸ್ಥೆಯೊಂದು ಜನ್ಮತಾಳಿತು. ಅದುವೇ ಲಿಂಗಾಯತ ಧರ್ಮವು. ಎರಡೆಂಬತ್ತು ಲಕ್ಷ ವಚನಗಳ ತಾತ್ವಿಕ ಚಿಂತನೆಗಳ ತತ್ವಗಳನ್ನು ಒಳಗೊಂಡಿತ್ತು. ವರ್ಣ, ಜಾತಿ, ಅಸ್ಪೃಶ್ಯತೆಗಳ ಮೂಲ ಬೇರುಸಮೇತ ಕಿತ್ತೊಗೆಯಲು ಬ್ರಾಹ್ಮಣ ಮಧುವರಸನ ಮಗಳು ಲಾವಣ್ಯವತಿ ಮತ್ತು ಅಸ್ಪೃಶ್ಯ ಹರಳಯ್ಯನ ಮಗ ಶೀಲವಂತ ಅವರೀರ್ವರ ಅಂತರ್ಜಾತಿಯ ವಿವಾಹ ಒಂದು ಅನುಭವ ಮಂಟಪದಲ್ಲಿ ಸರ್ವ ಶರಣರ ಸಮ್ಮುಖದಲ್ಲಿ ನಡೆದುಹೋಯಿತು. ಮಾನವೀಯ ಮೌಲ್ಯವನ್ನು ಎತ್ತಿಹಿಡಿದು ಸಮಾಜದಲ್ಲಿ ಸಮಾನತೆಯನ್ನು ತರುವುದು ಮತ್ತು ಮಾನವೀಯತೆಯನ್ನು ಮಣ್ಣುಗೂಡಿಸಿದ್ದ ಹಿಂದೂ ವ್ಯವಸ್ಥೆಯ ನೈತಿಕತೆಯನ್ನು ಪ್ರಶ್ನಿಸುವ ಮೂಲಕ ಶೋಷಿತರನ್ನು ಮತ್ತು ಮಹಿಳೆಯರನ್ನು ಹಾಗೂ ಶೂದ್ರಾತಿಶೂದ್ರರನ್ನು ಧರ್ಮೋ-ಸಾಮಾಜಿಕ ಕರೆಯಿಂದ ವಿಮೋಚನೆಗೊಳಿಸುವದಾಗಿತ್ತು. ಬಸವಾದಿ ಶರಣರು ಜಾತಿ, ಮತ, ಪಂಥ, ಸ್ತ್ರೀ-ಪುರುಷ, ಬಡವ-ಬಲ್ಲಿದರೆಂಬ ಯಾವ ಭೇದಭಾವಗಳಿಲ್ಲದೆ ನಿತ್ಯನೂತನವಾದ ಸತ್ಯ ತತ್ವಗಳನ್ನು ಚರ್ಚಿಸಿ ವಚನ ರೂಪದಲ್ಲಿ ಸೂತ್ರೀಕರಿಸಿ ಜನಜಾಗೃತಿಯನ್ನು ಮೂಡಿಸಿದಾತರು. ಸಾಮಾಜಿಕ ಅಸಮಾನತೆಯ ವಿರುದ್ಧ ಜಾತಿ, ಅಸ್ಪೃಶ್ಯತೆ ಮತ್ತು ಲಿಂಗಭೇದಗಳ ವಿರುದ್ಧ ಧರ್ಮಸಮರವನ್ನೇ ಸಾರಿದಾತರು. ದುರ್ಬಲರ ದೌರ್ಜನ್ಯಗಳಿಗೆ ಧರ್ಮೋ-ತಾತ್ವಿಕ ಅಡಿಪಾಯದ ಮೇಲೆ ಹೊಸ ಧಾರ್ಮಿಕ ಚಳುವಳಿಯನ್ನು ಸಮಾಜಕ್ಕೆ ಹುಟ್ಟು ಹಾಕಿದವರು. ಭಾರತೀಯ ಸಮಾಜಕ್ಕೆ ಕಳಂಕಪ್ರಾಯವಾಗಿದ್ದ ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಗಳ ವಿರುದ್ಧ ಬಸವಣ್ಣನವರು ತಮ್ಮ ಅಸಮಾಧಾನವನ್ನು ಹೊರ ಹಾಕಿರುವುದನ್ನುಈ ಕೆಳಗಿನ ವಚನದಲ್ಲಿ ಕಾಣಬಹುದು.

"ನೆಲವೊಂದೆ ಹೊಲಗೇರಿ-ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ,
ಕುಲವೊಂದೆ ತನ್ನ ತಾನರಿದವಂಗೆ,
ಫಲವೊಂದೆ ಷಡುದರುಶನ ಮುಕ್ತಿಗೆ

ನಿಲವೊಂದೆ ಕೂಡಲಸಂಗಮದೇವಾ, ನಿಮ್ಮನರಿದವಂಗೆ"[1]

ಮನುಷ್ಯನು ಅನುಸರಿಸಬೇಕಾದ ನಿಜವಾದ ವೃತವೆಂದರೆ ಸಚ್ಚಾರಿತ್ರ, ಸದ್ವರ್ತನೆ, ಸದಾಚಾರಗಳಿಂದ ಎಂಬುದನ್ನು ಈ ಮೇಲಿನ ವಚನಗಳು ತಿಳಿಸಿಕೊಡುತ್ತವೆ. ಬಸವಣ್ಣನವರ ವಚನಗಳು ವರ್ಗರಹಿತ ಜಾತ್ಯಾತೀತವಾದ ಸಮಾನ ಸ್ವರೂಪದ ಸಮಾಜವನ್ನು ಚಿತ್ರಿಸುತ್ತದೆ. ಜಾತೀಯತೆಯನ್ನು ತೊಲಗಿಸಲು ಬಸವಣ್ಣನವರು ಎಲ್ಲ ಸಮುದಾಯದ ವ್ಯಕ್ತಿಗಳಿಗೂ ಲಿಂಗದೀಕ್ಷೆಯನ್ನು ನೀಡಿದುದಷ್ಟೇ ಅಲ್ಲ ಪ್ರಜಾಪ್ರಭುತ್ವದ ಸಮಾನತೆಯ ಸಮಾಜದ ಅನುಷ್ಠಾನಕ್ಕೆ ತರುವುದು ಅವರ ಉದ್ದೇಶವಾಗಿತ್ತು. ಅವರು ಶೂದ್ರ ದಲಿತರನ್ನು ಕುರಿತು ತೋರುತ್ತಿದ್ದ ಆತ್ಮೀಯತೆ ಸರ್ವರಲ್ಲೂ ಸರ್ವೇಶ್ವರನನ್ನು ಕಂಡಾಗಿತ್ತು. ತ್ತು ಅದು ಅವರ ನರನಾಡಿಗಳಲ್ಲಿ ತುಂಬಿ ಹೋಗಿತ್ತು.

"ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ;
ನುಡಿ ಲೇಸು ನಡೆಯಧರ್ಮವಾದಲ್ಲಿ, ಅದೇ ಬಿಡುಗಡೆ
ಇಲ್ಲದ ಹೊಲೆ, ಕಳವು, ಪರದಾರಂಗಳಲ್ಲಿ ಹೊಲಬನರಿಯದೆ,
ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲುಂಟೆ ?
ಆಚಾರವೇ ಕುಲ, ಅನಾಚಾರವೇ ಹೊಲೆ,
ಇಂತೀ ಉಭಯವ ತಿಳಿದು ಅರಿಯಬೇಕು,
ಕಯ್ಯುಳಿಗತ್ತಿ ಅಡಿಗೊಂಟೆ ಕಡೆಯಾಗಬೇಡ,
ಅರಿ ನಿಜಾತ್ಮರಾಮನಾ"[2]

ಬಸವಣ್ಣನವರ ಮೇಲ್ಕಂಡ ವಚನಗಳು ಅವರಿಗೆ ಶೂದ್ರ, ಅಂತ್ಯಜರ ಕುರಿತಾಗಿದ್ದ ಗೌರವವನ್ನು ತೋರಿಸುವುದರ ಜೊತೆಗೆ ವರ್ಣ ಜಾತಿಗಳ ಜಂಜಾಟದಿಂದ ತುಂಬಿ ಹೋಗಿದ್ದ ತಮ್ಮ ಹುಟ್ಟು ಹಿನ್ನಲೆಗಳತ್ತ ಅವರಿಗಿದ್ದ ತಿರಸ್ಕಾರವನ್ನು ತೋರಿಸುತ್ತವೆ. ಬಿಜ್ಜಳ–ಬಸವಣ್ಣರ ನಡುವಿನ ಧಾರ್ಮಿಕ ಸಂಘರ್ಷವು ಪರಾಕಾಷ್ಠೆಯನ್ನು ಮುಟ್ಟಿ ಬಿಜ್ಜಳನ ಕುರುಡು ಸಾಂಪ್ರದಾಯಿಕ ಮತ್ತು ಮುರ್ಖತನಗಳಿಂದ ಕಲ್ಯಾಣ ಸಾಮ್ರಾಜ್ಯವೇ ರಕ್ತಪಾತದಲ್ಲಿ, ಅಧಃಪತನಗೊಳ್ಳುವಂತಾಯಿತು. ಈ ಅನಾಹುತಗಳಿಗೆ ಮೂಲವಾಗಿದ್ದು, ಬಸವಣ್ಣನವರು ಸದುದ್ದೇಶದಿಂದ ನೆರವೇರಿಸಿದ ಹರಳಯ್ಯ ಮಗ ಶೀಲವಂತ ಮತ್ತು ಮಧುವರಸರ ಮಗಳು ಲಾವಣ್ಯವತಿಯರ ವಿವಾಹವನ್ನು ಏರ್ಪಡಿಸಿ, ತಾವೇ ಮುಂದಾಗಿ ನಿಂತು ಶುಭಕಾರ್ಯಗಳನ್ನು ನೆರವೇರಿಸಿ ಲಿಂಗದೀಕ್ಷೆ ಕೊಟ್ಟು ಆಶೀರ್ವದಿಸಿದ್ದರು. ಬಸವಣ್ಣನವರು ಇದರಿಂದ ಅವರು ಜಾತಿಭೇದಭಾವವನ್ನು ತೊಡೆದು ಹಾಕುವ ಪ್ರಯತ್ನವನ್ನು ಮಾಡಿದ್ದರು.

"ಹೊಲೆಯುಂಟೆ ಲಿಂಗಮವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ನಿಷ್ಕಲಂಕ ನಿಜೈಕ್ಯ ತ್ರಿವಿಧನಿರ್ಣಯ ।
ಕೂಡಲಸಂಗಮದೇವ । ನಿಮ್ಮ ಶರಣರಿಗಲ್ಲದಿಲ್ಲ ।"[3]

ಜಾತಿ ಮತ್ತು ಅಸ್ಪೃಶ್ಯತೆಯಿಂದ ಜರ್ಜಿತವಾದ ಈ ದೇಶದ ವ್ಯವಸ್ಥೆಗೆ ಹೇಳುವ ಮಾತಿದು. ಈ ದೇಶದ ಜಿಡ್ಡುಗಟ್ಟಿದ ವ್ಯವಸ್ಥೆಗೆ ಹಾಕುವ ಪ್ರಶ್ನೆಗಳಿವು. ಸಹಪಂಕ್ತಿ ಭೋಜನ ನಿಷೇಧವಿರುವ ಈ ಹಿಂದೂ ವ್ಯವಸ್ಥೆಯ ಹರಿಕಾರನಾದ ಸವರ್ಣಿಯನಿಗೆ ಹೇಳುವ ಪರಿಯಿದು. ತನ್ಮೂಲಕ ಕರ್ಮಕಾಂಡ ಸನಾತನ ಧರ್ಮದ ಅಂತಃಸತ್ವವನ್ನೇ ಅಲುಗಾಡಿಸಿದ್ದಾರು.

1 Dr. Yaravintelimath C.R. : The Caste Eradication Vachanas of Basaveswara, Prasaranga, Karnatak University, Dharwad, 2013, p.57.

2 ಶ್ರೀ ಶಿವರುದ್ರ ಮಹಾಸ್ವಾಮಿಗಳು (ಸಂ) : ಬಸವಪಥ, ಸಂ.27, ಸಂಚಿಕೆ–2, ಬಸವ ಸಮಿತಿ, ಬೆಂಗಳೂರು, 2005, ಪು.123.

3 ದೇಸಾಯಿ ವೆಂಕಟರೆಡ್ಡಿ (ಸಂ) : ಬಸವಣ್ಣನವರ ವಚನಗಳು, ಪ್ರಕಾಶಕರು: ಗುರುನಾಥರೆಡ್ಡಿ ಮ. ದೇಸಾಯಿ, ವಿದ್ಯಾನಗರ ಹುಬ್ಬಳ್ಳಿ, 1998, ಪು.ಸಂ. 143

ಇಷ್ಟಲಿಂಗವ ಧರಿಸಿದ ಮೇಲೆ ಹೊಲೆ ಸೂತಕವಿಲ್ಲ. ಜಂಗಮನಿದ್ದಲ್ಲಿ ಕುಲಾಚಾರಗಳಿಲ್ಲ. ಹಾಗೆ ಪ್ರಸಾದವಿದ್ದಲ್ಲಿ ಎಂಜಲವಿಲ್ಲವೆಂದು ಮತ್ತೊಂದು ವಚನದಲ್ಲಿ ಲಿಂಗ ಸಮತಾವಾದದ ಜನಕ ಬಸವಣ್ಣನವರು ತಮ್ಮ ವಚನದಲ್ಲಿ ಈ ರೀತಿ ಹೇಳುತ್ತಾರೆ;

"ಹೊಲೆಯೊಳಗೆ ಹುಟ್ಟಿ ಕುಲವರನರಸುವೆ
ಎಲವೊ, ಮಾತಂಗಿಯ ಮಗ ನೀನು;
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೊ ।"[4]

ಮಹಾಶಿವಶರಣ ಸಿದ್ಧರಾಮನು ಹೆಣ್ಣಿನ ಹಿರಿಮೆ–ಗರಿಮೆಯನ್ನು ಗುರುತಿಸಿದ್ದಾರೆ. ಹೆಣ್ಣು ಕೇವಲ ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಚಂಚೆಲಯಲ್ಲ, ಹೆಣ್ಣು ಸಾಕ್ಷಾತ್ ಆದಿಶಕ್ತಿ ಎಂದು ಕೊಂಡಾಡಿದ್ದಾರೆ. ದೈವದೊಂದಿಗೆ ಸಮೀಕರಿಸುವ ಅವರ ದೃಷ್ಟಿಕೋನದ ಹಿರಿಮೆ ಇದಕ್ಕಿಂತಲೂ ಇನ್ನೇನನ್ನು ಹೇಳಲು ಸಾಧ್ಯವಿಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ. ಈ ಎಲ್ಲ ತಾರತಮ್ಯ, ಮೇಲು–ಕೀಳು ಭಾವನೆಗೆ ತಾಯಿಬೇರಿನಂತೆ ಹಾಲೆರೆದು ಪೋಷಿಸುವ ವೇದಶಾಸ್ತ್ರಪುರಾರಣ, ಸ್ಮೃತಿಗಳ ಅಸ್ತಿತ್ವವನ್ನೇ ಅಲ್ಲಗಳೆದಿದ್ದಾರೆ.

"ತಾನು ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾನು ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾನು ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾನು ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಇದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ"[5]

ಅಂಬಿಗೇರ ಚೌಡಯ್ಯನು ಸ್ತ್ರೀ–ಪುರುಷ ಸಮಾನತೆಯನ್ನು ಎಷ್ಟು ನವುರಾಗಿ ಮತ್ತು ನಯವಾಗಿ ಅಭಿವ್ಯಕ್ತಪಡಿಸಿದ್ದಾರೆ.

ದೇಹದ ಅಂಗರಚನೆಯಲ್ಲಿ ಮಾತ್ರ ಭಿನ್ನತೆಯಿದ್ದರೂ ಒಳಗೆ ಸುಳಿಯುವ ಆತ್ಮವೊಂದೆ. ಅದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಶರೀರದ ರಚನೆಗನುಸಾರವಾಗಿ ನಾವೇ ಸ್ತ್ರೀ–ಪುರುಷರೆಂದು ಕರೆಯುತ್ತೇವೆ ಅಷ್ಟೇ. ಆದ್ದರಿಂದ ಇವರಿಬ್ಬರಲ್ಲಿ ವ್ಯತ್ಯಾಸವೇ ಇಲ್ಲವೆಂದು ಪ್ರತಿಪಾದಿಸಿರುವುದು ಅಂಬಿಗೇರ ಚೌಡಯ್ಯನ ಪ್ರತಿಪಾದನೆಯಾಗಿತ್ತು.

"ಮಾಯೆಯ ಬಸುರಲ್ಲಿ ಬಂದಾತ ಮಹೇಶ
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ
ಮರುತ ದೇವಿಯ ಬಸುರಲ್ಲಿ ಬಂದಾತ ಹಾರುವ
ಇವರು ದೇವರೆಂದು ನಂಬಿ ಪೂಜಿಸಿದರೆ ಭವ ಅಳಿಯದು
ಮುಕ್ತಿಯಾಗದೆಂದಾತನಂಬಿಗ ಚೌಡಯ್ಯ"[6]

---

[4] Dr. Yaravintelimath C.R. : The Caste Eradication Vachanas of Basaveswara, Prasaranga, Karnatak University, Dharwad, 2013, p.25.

[5] ಶರಣಲಿಂಗಬಸಪ್ಪ ಅಂಗಡಿ, ಬಸವಾದಿ ಶರಣರ ವಚನ ದೀಪ್ತಿ, ಬಸವಕೇಂದ್ರ, ಇಲಕಲ್, 2002, ಪು.ಸಂ. 41.

[6] ಪ್ರೊ. ಭೂಸರೆಡ್ಡಿ ಎಸ್.ಎಸ್. : ವಚನಕಾರ ಅಂಬಿಗೇರ ಚೌಡಯ್ಯ, ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನಮಠ, ಮುಂಡರಗಿ, ಧಾರವಾಡ, 1996, ಪು.ಸಂ. 101.

ತ್ರಿಮೂರ್ತಿಗಳ ಜೊತೆಗೆ ಭೂದೇವತೆ ಬ್ರಾಹ್ಮಣನನ್ನೂ ಕೂಡಿಸಿ ಇವರನ್ನು ದೇವರೆಂದು ನಂಬುವ ನಂಬಿಕೆಯ ಮೂಲವನ್ನೇ ತಿರಸ್ಕರಿಸುತ್ತಾನೆ. ಅಂಬಿಗೇರ ಚೌಡಯ್ಯನ ಪ್ರಕಾರ ಇಷ್ಟಲಿಂಗವೆಂದರೆ ಇಷ್ಟದೇವಲ್ಲ. ದೈವೀಭಾವದಲ್ಲಿ ಕಾಯಕ ಮುಖಿಯಾದ ಮನಸ್ಸು, ಅಂಗದ ಮೇಲಣ ಲಿಂಗವಲ್ಲ. ದೇಹದೊಳಗಿನ ಜೀವಭಾವ ಪಡೆಯಬೇಕಾದ್ದು ದೈವೀ ಗುಣ ಸ್ವರೂಪವನ್ನು. ಹೀಗಾಗಿ ಉಣಲಿಕ್ಕಿ ಸಂತೋಷಪಡುವ ಮನಸ್ಸಿನ ತೃಪ್ತಿಯನ್ನು ನಿಜವಾದ ಪೂಜೆ.

ಒಟ್ಟಾರೆಯಾಗಿ ವಿಶ್ವಗುರು ಜಗಜ್ಯೋತಿ ಬಸವಾದಿ ಶರಣರು ತಮ್ಮ ವಚನಗಳಲ್ಲಿ ಜರ್ಜರಿತವಾಗಿದ್ದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಕ್ರಾಂತಿಯ ಕಹಳೆಯನ್ನೇ ಮೊಳಗಿಸಿದ್ದರು. ಬಸವಾದಿ ಶರಣರ ಎಲ್ಲ ವಚನಗಳ ಸಾರಾಂಶವು ವರ್ಣ, ಜಾತಿ ಮತ್ತು ಲಿಂಗಾಧಾರಿತ ಹಿಂದೂ ವ್ಯವಸ್ಥೆಯನ್ನು ಕಿತ್ತು ಹಾಕುವದಾಗಿತ್ತು. ನಿಕೃಷ್ಟ ಜಾತಿ ಧರ್ಮೀಯರಲ್ಲಿ ಬದುಕಿನ ಭರವಸೆ ಮತ್ತು ಆತ್ಮ ಸ್ಥೈರ್ಯವನ್ನು ತುಂಬುವದಾಗಿತ್ತು. ದಲಿತ ಹಿಂದುಳಿದ ಸ್ತ್ರೀಯರಲ್ಲಿ ಅರಿವಿನ ಜಾಗೃತಿಯನ್ನು ಮೂಡಿಸುವದಾಗಿತ್ತು. ಅಸ್ಪೃಶ್ಯತೆಯನ್ನು ಹೋಗಲಾಡಿಸಿ ನಾಡಿನಲ್ಲಿ ಭಾವೈಕ್ಯತೆಯ ಭಾವನೆಗಳನ್ನು ಪುನರ್ ನಿರ್ಮಾಣಗೊಳಿಸುವುದಾಗಿತ್ತು. ಬಸವಾದಿ ಶರಣರ ವಚನಗಳ ಚಿಂತನೆಗಳಲ್ಲಿ ಧರ್ಮ, ವರ್ಣ, ಜಾತಿ ಮತ್ತು ಲಿಂಗತಾರತಮ್ಯಗಳನ್ನು ಬೇರು ಸಮೇತ ಕಿತ್ತೊಗೆಯುವದಾಗಿತ್ತು. ಸ್ವಾವಲಂಬನೆ, ಸ್ವಾಭಿಮಾನ ಮತ್ತು ಆತ್ಮ ಗೌರವಗಳನ್ನು ಶೋಷಿತ ಜನಾಂಗಗಳಲ್ಲಿ ಮರು ಪ್ರತಿಷ್ಠಾಪಿಸುವುದು ಬಸವಾದಿ ಶರಣರ ವಚನಗಳಲ್ಲಿ ಸಾಮಾಜಿಕ ನ್ಯಾಯದ ಮೂಲ ಪರಿಕಲ್ಪನೆಯಾಗಿದೆ. ಮಂದಮತಿಗಳಿಗೆ ಬದುಕುವ ಹಸನಾದ ದಾರಿಯನ್ನು ತೋರಿಸಿ ಎಲ್ಲರಲ್ಲಿ ಸಮಾನತೆ ಮಾಡಿಸಿ ಜಾತಿಭೇದವನ್ನು ಹೋಗಲಾಡಿಸಿ, ಅರಿವು ಅನುಭವ ಆಚಾರ ಮತ್ತು ನಡೆ–ನುಡಿಗಳ ಸಮನ್ವಯತೆಯ ಸಂದೇಶವನ್ನು ಸಾರವದಾಗಿತ್ತು. ಸಮಾಜದಲ್ಲಿ ಅಸ್ಪೃಶ್ಯರ ಮತ್ತು ಸ್ತ್ರೀಯಳ ಸ್ಥಿತಿಗತಿಯನ್ನು ಸುಧಾರಿಸಿ ಸಮಾಜದ ಮೇಲಸ್ಥರಕ್ಕೆ ತರುವದಾಗಿತ್ತು. ಸವರ್ಣೀಯರ ದರ್ಪವನ್ನು ಹೋಗಲಾಡಿಸಿ ಶೋಷಿತರು ಕಳೆದುಕೊಂಡ ಮಾನವ ಹಕ್ಕುಗಳನ್ನು ಮರಳಿಸುವದಾಗಿತ್ತು. ಭಾರತೀಯ ಹಿಂದೂಗಳು ದೇವರು ಮತ್ತು ಧರ್ಮಗಳ ವಿಪರೀತ ಪರಿಣಾಮಗಳಿಂದ ಮಾನವೀಯತೆಯನ್ನು ಕಳೆದುಕೊಂಡಿದ್ದರಿಂದ ಆ ಸತ್ಯವನ್ನು ಬಯಲು ಮಾಡಲು ಜಾತಿಯಿಂದ ವಂಚಿತರಾದ ಮಹಿಳೆಯರಿಗೆ ಧಾರ್ಮಿಕ ಬಂಧನಗಳ ಭಯಾನಕತೆಯನ್ನು ಬಯಲು ಮಾಡಿ, ಸನ್ಮಾರ್ಗದಲ್ಲಿ ಎಳೆ ತರುವ ಪ್ರಯತ್ನ ಅವರದಾಗಿತ್ತು. ಧರ್ಮವೆಂಬ ಹೆತ್ತ ತಾಯಿಯನ್ನು ವ್ಯಭಿಚಾರಕ್ಕಿಳಿದಿದ್ದವರ ಮರ್ಮವನ್ನು ಬಯಲು ಮಾಡಿ ಅಸ್ಪೃಶ್ಯತೆಯೆಂಬ ಬ್ರಹ್ಮರಾಕ್ಷಸನಿಂದ ಮುಕ್ತಿಗೊಳಿಸುವದಾಗಿತ್ತು. ಪ್ರತಿಯೊಬ್ಬ ಮಾನವ ಜೀವಿಯು ದೇಹದಲ್ಲೇ ದೇವರು ಇದ್ದಾನೆಂದು ಶರಣರು ತಿಳಿಸಿದ್ದಾರೆ.

ಈ ಮೇಲಿನ ವಚನಗಳ ಮೂಲಕ ಮಾನವ ಜೀವನದ ಸಾಧನೆ ಮತ್ತು ಜೀವನ ಸಾಫಲ್ಯಕ್ಕೆ ಸಂಕಲ್ಪಗಳಿರಬೇಕು ಎಂಬ ದೃಢ ನಿಶ್ಚಯವು ಅವರದಾಗಿತ್ತು. ಹಾಗಾಗಿ ಬಸವಾದಿ ಶರಣರ ಸಂದೇಶದ ಮೂಲಕ ರಾಷ್ಟ್ರ ಕಟ್ಟುವ ಪ್ರಕ್ರಿಯೆಯು ಪರಿಪೂರ್ಣವಾಗಲೆಂದು ಹಾರೈಸುತ್ತೇನೆ.

## ಆಧಾರ ಗ್ರಂಥಗಳು :


1. ಶರಣಲಿಂಗಪ್ಪ ಅಂಗಡಿ : 'ಬಸವಾದಿ ಶರಣರ ವಚನ ದೀಪ್ತಿ', ಬಸವ ಕೇಂದ್ರ ಚಿತ್ತರಗಿ, ಶ್ರೀ ವಿಜಯ ಮಹಾಂತೇಶ್ವರ, ಇಲಕಲ್ಲ, 2002.
2. ಡಾ. ಚಂದ್ರಶೇಖರ ಟಿ.ಆರ್. : 'ಲಿಂಗಾಯತ ತತ್ವ ಪ್ರಣಾಳಿಕೆ', ನೀಲಗಂಗಾ ಪ್ರಕಾಶನ, ಬಾಗಲಕೋಟ, 2010.
3. ಡಾ. ವೀರಣ್ಣ ರಾಜೂರ (ಸಂ) : 'ಷಟ್ಸ್ಥಲ : ಒಂದು ಅಧ್ಯಯನ', ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2003.
4. ಅಂಗಡಿ ಲಿಂಗಬಸಪ್ಪ : 'ಬಸವಾದಿ ಶರಣರ ವಚನ ದೀಪ್ತಿ', ಬಸವ ಕೇಂದ್ರ, ಚಿತ್ತರಗಿ, ಶ್ರೀ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, 2002.
5. ಡಾ.ಬಿ.ಆರ್. ಹಿರೇಮಠ (ಸಂ ಇತರರು) : 'ಬಸವಣ್ಣನವರ ವಚನಗಳ ಸಮಾಲೋಕ', ಶ್ರೀ ಚನ್ನವೀರ ಸ್ವಾಮೀಜಿ ಪ್ರತಿಷ್ಠಾನ, ಸಾಗರಂಗ ಮಠ, ಸಿಂದಗಿ, 2003.
6. ದೇಸಾಯಿ ವೆಂಕಟರೆಡ್ಡಿ (ಸಂ) : ಬಸವಣ್ಣನವರ ವಚನಗಳು, ಪ್ರಕಾಶಕರು: ಗುರುನಾಥರೆಡ್ಡಿ ಮ. ದೇಸಾಯಿ, ವಿದ್ಯಾನಗರ ಹುಬ್ಬಳ್ಳಿ, 1998.
7. ಡಾ॥ ಚಂದ್ರಶೇಖರ ಟಿ.ಆರ್. : ಲಿಂಗಾಯತ ತತ್ವ ಪ್ರಣಾಳಿಕೆ, ನೀಲಗಂಗಾ ಪ್ರಕಾಶನ, ಬಾಗಲಕೋಟ, 2010.
8. ಪ್ರೊ. ಭೂಸರೆಡ್ಡಿ ಎಸ್.ಎಸ್. : ವಚನಕಾರ ಅಂಬಿಗೇರ ಚೌಡಯ್ಯ, ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನಮಠ, ಮುಂಡರಗಿ, 1996.